ಪಿ.ಡಬ್ಲ್ಯೂ1 ಸಿ. ಸಿ.ನಂ.1108/2022

ದಿನಾಂಕಃ 08-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಆರೋಪಿ ಪರ ವಕೀಲರಾದ ಶ್ರೀ ಎನ್ ಎಂ ಎನ್ ವಕೀಲರಿಂದಃ

ಈಗ ಎಲ್ಲಿ ವಾಸ ಮಾಡುತ್ತಿದ್ದೀರಿ ಎಂದರೆ 10 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಇದ್ದೇನೆ. ನಾನು ಖಾಯಂ ಆಗಿ ಅಲ್ಲೇ ಇರುತ್ತೇನೆ. ಆಟೋ ಮೊಬೈಲ್ ಕನ್ಸಲ್ಟೆನ್ಸಿ ಇದ್ದು ವಾಹನಗಳನ್ನು ತೆಗೆದುಕೊಳ್ಳುವುದು ಮಾರಾಟ ಮಾಡುವುದು. ನಿಮ್ಮದು ಕಛೇರಿ ಮತ್ತು ಶೋ ರೂಂ ಇದೆಯಾ ಎಂದರೆ ಇಲ್ಲ. ನಾನು ಒಬ್ಬನೇ. ನಾನು ಒಬ್ಬನೇ ಬೆಂಗಳೂರಿನಲ್ಲಿ ಇರುತ್ತೇನೆ. ನನಗೆ ಮದುವೆಯಾಗಿ ವಿಚ್ಛೇದನೆಯಾಗಿರುತ್ತದೆ. ನಿಮ್ಮ ಆದಾಯಕ್ಕೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಇಲ್ಲ. ನೀವು ಆದಾಯ ತೆರಿಗೆ ಪಾವತಿದಾರರು ಆಗಿದ್ದೀರಾ ಎಂದರೆ ಇಲ್ಲ. ನಾನು ದ್ವಿತೀಯ ಪಿ ಯು ಸಿ ವರೆಗೆ ಓದಿರುತ್ತೇನೆ. ನನ್ನ ತಂದೆ ಹೆಸರು ಮೂರ್ತಿ ಜೆ. ಎಸ್. ಅವರು ಚಿಂತಾಮಣಿಯ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಯಾವ ಶಾಲೆ ಅಂತ ಗೊತ್ತಿಲ್ಲ. ಅವರು ಹೆಸರು ವಿಜಯ ಮೂರ್ತಿ ಅಂತ ಕರೆಯುತ್ತಾರೆ ಎಂದರೆ ಅಲ್ಲ ಮೂರ್ತಿ ಅಂತ ಕರೆಯುತ್ತಾರೆ.

ದೂರಿನಲ್ಲಿ ಏನು ಬರೆದಿರುತ್ತದೆ ಅಂತ ಗೊತ್ತಿರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಇರುತ್ತದೆ ಅಂತ ಓದಿ ತಿಳಿದುಕೊಂಡು ಸಹಿ ಹಾಕಿರುತ್ತೇನೆ. ಆರೋಪಿ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಅವರು ಚಿಕ್ಕವಯಸ್ಸಿನಿಂದ ಪರಿಚಯ ಇರುತ್ತಾರೆ. ಅವರು ನಮ್ಮ ಕುಟುಂಬದ ಸ್ನೇಹಿತರು. ಆರೋಪಿ ತಳಗವಾರದಲ್ಲಿ ಮುಖ್ಯ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ. ನನ್ನ ತಂದೆ ಎಲ್ಲಿ ಕೆಲಸ ಮಾಡುತ್ತಾರೆ ಅಂತ ನನಗೆ ಗೊತ್ತಿಲ್ಲ. ಆರೋಪಿಗೆ ದಿಃ14-01-2019 ರಂದು ಹಣ ಕೊಟ್ಟಿರುತ್ತೇನೆ. ಆರೋಪಿ ಮನೆ ಕಟ್ಟುವುದಕ್ಕೆ ಅಂತ ಹೇಳಿ ಹಣ ಕೊಟ್ಟಿರುತ್ತೇನೆ. ಆರೋಪಿ ಮನೆ ಕಟ್ಟುವುದಕ್ಕೆ ಹಣ ಕೇಳಿರುತ್ತಾರೆ ಅಂತ ನಿಮ್ಮ ದೂರಿನಲ್ಲಿ ಹೇಳಿರುತ್ತೀರಾ ಎಂದರೆ ನಮೂದು ಮಾಡಿರುತ್ತಾರೆ ಅಂತ ಅಂದುಕೊಂಡಿರುತ್ತೇನೆ. ಹಣ ಕೇಳಿಕೊಂಡು ಆರೋಪಿ ಒಬ್ಬರೇ ಟ್ಯಾಂಕ್ ಬಂಡ್ ರಸ್ತೆಯಲ್ಲಿ ಇರುವ ಮನೆಗೆ

ಬಂದಿರುತ್ತಾರೆ.  ಹಣ ಕೊಡುವಾಗ ನಾನು ಮತ್ತು ನನ್ನ ತಾಯಿ ಇರುತ್ತೇವೆ.  ಹಣ ಕೊಡುವ  ವಿಚಾರ ನನ್ನ ತಾಯಿಗೂ ಸಹ ಗೊತ್ತಿರುತ್ತದೆ.  ಹಣ ಕೇಳಿದ ದಿನವೇ ನಾನು ಆರೋಪಿಗೆ ಹಣ ಕೊಟ್ಟಿರುವುದಿಲ್ಲ.

ಹಣ ನಿಮಗೆ ಎಲ್ಲಿಂದಬಂತು ಎಂದರೆ ಬಿಜಿನೆಸ್ ಮಾಡುವುದರಿಂದ ಹಣ ಬಂದಿರುತ್ತದೆ. 4,50,000/ ಹಣವನ್ನು ನಿಮ್ಮ ಬ್ಯಾಂಕ್ ನಲ್ಲಿ ಇಟ್ಟಿರುತ್ತೀರಾ, ಮನೆಯಲ್ಲಿ ಇಟ್ಟಿರುತ್ತೀರಾ ಎಂದರೆ ಸಾಕ್ಷಿಯು ಮನೆಯಲ್ಲಿ ಇರುವುದನ್ನು ಕೊಟ್ಟಿರುತ್ತೇನೆ. ಆ ಹಣ ಎಲ್ಲಿಂದ ಬಂತು ಎಂಬುದಕ್ಕೆ ದಾಖಲೆ ಇದೆಯಾ ಎಂದರೆ ಬಿಜಿನೆಸ್ ನಿಂದ ಬಂದಿರುತ್ತದೆ ಅದಕ್ಕೆ ದಾಖಲೆ ಇಲ್ಲ.  ಎಷ್ಟು ವರ್ಷದಿಂದ ನೀವು ಚಿಂತಾಮಣಿಯಲ್ಲಿ ಬಡ್ಡಿ ವ್ಯವಹಾರ ಮಾಡುತ್ತೀರಿ ಎಂದರೆ ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ಪೋಸ್ಟ್ ಮಾಸ್ಟರ್ ರಾಮಾಂಜಿನೇಯಪ್ಪ ನನಗೆ ಗೊತ್ತಿರುವುದಿಲ್ಲ.  ನಿಮ್ಮ ತಂದೆ ಮತ್ತು  ರಾಮಾಂಜಿನಪ್ಪ ಸಂಬಂಧಿಕರು ಎಂದರೆ ಅಲ್ಲ.  ಹರಿ ಅಥವಾ ಹರೀಶ್ ಬಾಬು ಗೊತ್ತಿರುವುದಿಲ್ಲ. ನಮ್ಮ ತಂದೆಯವರು  ಚಿಂತಾಮಣಿಯ ಟ್ಯಾಂಕ್ ಬಂಡ್ ರಸ್ತೆಯಲ್ಲಿ, ಟ್ಯಾಂಕ್ ಬಂಡ್ ರಸ್ತೆಯಲ್ಲಿ ಎಲ್ಲಿ ಎಂದರೆ ವಿಳಾಸ ಸರಿಯಾಗಿ ಗೊತ್ತಿಲ್ಲ. 10 ವರ್ಷಗಳಿಂದ ನೀವು ಚಿಂತಾಮಣಿಗೆ ಬಂದಿರುವುದಿಲ್ಲವಾ ಎಂದರೆ ಬಂದಿರುತ್ತೇನೆ ಮನೆಯ ವಿಳಾಸ ಸರಿಯಾಗಿ ಗೊತ್ತಿರುವುದಿಲ್ಲ. ಆರೋಪಿಯ ವಿಳಾಸ ಗೊತ್ತಿಲ್ಲ ಶಾಲೆಯ ವಿಳಾಸ ಗೊತ್ತಿರುತ್ತದೆ. ಆರೋಪಿ ಎಲ್ಲಿ ವಾಸ ಮಾಡುತ್ತಾರೆ ಅಂತ ಗೊತ್ತಿರುವುದಿಲ್ಲ. ನಿಮ್ಮ ತಂದೆಯವರನ್ನು ಮೂರ್ತಿ ಅಥವಾ ವಿಜಯ ಮೂರ್ತಿ ಅಂತ ಕರೆಯುತ್ತಾರೆ ಎಂದರೆ ಅಲ್ಲ. ನಿಮ್ಮ ತಂದೆಯವರು ಶಿಕ್ಷಕರಾಗಿ ಕೆಲಸ  ಮಾಡುತ್ತಿದ್ದು ಬಡ್ಡಿ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಇಲ್ಲ. ರಾಮಾಂಜಿನಪ್ಪ ರವರು ಚಿಂತಾಮಣಿಯಲ್ಲಿ ಬಡ್ಡಿ ವ್ಯವಹಾರ ಮಾಡುತ್ತಾರೆ  ಎಂದರೆ ಅವರು ಯಾರು ಅಂತ ಗೊತ್ತಿಲ್ಲ. ನನ್ನ ತಾಯಿ ಹೆಸರು ಮಮತ. ನಮ್ಮ ತಾಯಿಯವನ್ನು ಸಾಕ್ಷಿದಾರರನ್ನಾಗಿ ಕರೆದುಕೊಂಡು ಬರುತ್ತೇನೆ. ರಾಮಾಂಜಿನೇಯಪ್ಪ, ನಿಮ್ಮ ತಂದೆ ಮತ್ತು  ಹರೀಶ್ ಅಲಿಯಾಸ್ ಹರಿ ಎಂಬುವವರು ಚಿಂತಾಮಣಿಯಲ್ಲಿ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ಅವರು ಯಾರು ಅಂತ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಚೆಕ್ ಅನ್ನು ನಗಧೀಕರಣಕ್ಕೆ ಸಲ್ಲಿಸಿದಾಗ ಏನಂತ ಹಿಂಬಹರ ಬಂದಿತ್ತು ಎಂದರೆ ಸಾಕಷ್ಟು ಹಣ ಇಲ್ಲ ರೆಪರ್ ಟು ಡ್ರಾಯರ್ ಅಂತ ಬಂದಿರುತ್ತದೆ.  ರೆಪರ್ ಟು

ಡ್ರಾಯರ್ ಎಂದು ಬಂದಿರುವುದಕ್ಕೆ ವಿಚಾರಣೆ ಮಾಡಿರುವುದಿಲ್ಲ. ರೆಫರ್ ಟು ಡ್ರಾಯರ್ ಏನಂತ ಕೇಳಿರುತ್ತೀರಿ ಎಂದರೆ ಇನ್ನು ಸ್ವಲ್ಪ ಸಮಯ ಬೇಕು ಅಂತ ಹೇಳಿರುತ್ತಾರೆ. ಅದರ ಬಗ್ಗೆ ಬ್ಯಾಂಕ್ ನವರನ್ನು ನಾನು ಕೇಳಿರುವುದಿಲ್ಲ. ನಿಪಿ-1 ಚೆಕ್ ನ ಮೇಲೆ ಇರುವ ಸಹಿಗೂ ಮತ್ತು ಅದರ ಮೇಲಿನ ಬರವಣಿಗೆ ವ್ಯತ್ಯಾಸ ಇದೆ ಎಂದರೆ ವ್ಯತ್ಯಾಸ ಇದೆ. ಅದರಲ್ಲಿ ಮಾಡಿರುವ ಸಹಿಯಲ್ಲಿ ಮಾಡಿರುವ ಇಂಕ್ ಗೂ ಮತ್ತು ಬರವಣಿಗೆಯಲ್ಲಿ ಮಾಡಿರುವ ಇಂಕ್ ಗೆ ವ್ಯತ್ಯಾಸ ಇದೆ ಎಂದರೆ ಹೌದು. ನಿಪಿ-1 ಚೆಕ್ ನಾನ್ ಸಿ ಟಿ ಎಸ್ ಚೆಕ್ ಆಗಿದ್ದು ಚಲಾವಣೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಆರೋಪಿ ನಿಮ್ಮ ತಂದೆಯ ಬಳಿ ಸಾಲ ಪಡೆದಿದ್ದರು ಎಂರದೆ ಇಲ್ಲ. ನಿಮ್ಮ ತಂದೆ ಮೀಟರ್ ಬಡ್ಡಿಯ ವ್ಯವಹಾರ ಮಾಡುತ್ತಾರೆ ಎಂದರೆ ಇಲ್ಲ. ಯಾವಾಗ ಸಾಲ ತೆಗೆದುಕೊಂಡಿರುತ್ತಾರೋ ಅವಾಗ ಚೆಕ್ ಕೊಟ್ಟಿರುತ್ತಾರೆ ಎಂದರೆ ಇಲ್ಲ. ಆ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಿ:24-06-2019 ರಲ್ಲ ಚೆಕ್ ಅನ್ನು ಕೊಟ್ಟಿರುತ್ತಾರೆ. ಶಾಲೆಯ ಹತ್ತಿರ ಚೆಕ್ ಅನ್ನು ಕೊಟ್ಟಿರುತ್ತಾರೆ. ನಾನು ಒಬ್ಬನೇ ಹೋಗಿರುತ್ತೇನೆ. ನಿಪಿ-1 ಚೆಕ್ ಅನ್ನು ಅವರೇ ಬರೆದುಕೊಟ್ಟಿರುತ್ತಾರೆ. ಚೆಕ್ ಅನ್ನು ಕೊಡುವಾಗ ಯಾರು ಯಾರು ಇದ್ದರು ಅಂತ ಹೇಳಲಾಗುತ್ತದಾ ಎಂದರೆ ನಾನು ಒಬ್ಬನು ಇದ್ದು ತೆಗೆದುಕೊಂಡು ಬಂದಿರುತ್ತೇನೆ. ಆರೋಪಿ ನಿಮಗೆ ಶಾಲೆಯ ಬಳಿ ಯಾವುದೇ ಚೆಕ್ ಕೊಟ್ಟಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚೆಕ್ ಅನ್ನು ಶಾಲೆಯ ಹತ್ತಿರ ಪಡೆದ ವಿಚಾರವನ್ನು ದೂರಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ.

ಆರೋಪಿಯು ಗೈರುಹಾಜರಿದ್ದು, ಗೈರು ಹಾಜರಿರುವ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದು, ಪಾಟೀಸವಾಲಿನಲ್ಲಿ ಆರೋಪಿ ಪರ ವಕೀಲರು ಆರೋಪಿ ನ್ಯಾಯಾಲಯದಲ್ಲಿ ಇದ್ದಾರ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿಯು ಇದ್ದಾರೆ ಅಂತ ಸಾಕ್ಷಿ ನುಡಿದಿದ್ದು, ಅವರನ್ನು ನ್ಯಾಯಾಲಯದ ಮುಂದೆ ತೋರಿಸಲಾಗಿ ಅದೇ ವ್ಯಕ್ತಿ ಆರೋಪಿ ಅಂತ ಸಾಕ್ಷಿ ನುಡಿದಿರುತ್ತಾರೆ. ಆರೋಪಿ ಗುರುತಿಸಿದ ವ್ಯಕ್ತಿಗೆ ಸಂಬಂದಿಸಿದ ಆದಾರ್ ಕಾರ್ಡ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಆದಾರ್ ಕಾರ್ಡ್ ನಲ್ಲಿ ಆ ವ್ಯಕ್ತಿಯ ಹೆಸರು ರಾಧಿಕ ಅಂತ ಇರುತ್ತದೆ. ಸಾಕ್ಷಿ ಮುಂದುವರಿದು ಅವರು ಮೂರು ಜನ ಒಟ್ಟಿಗೆ ಇದ್ದರು ಎಂದು ನುಡಿಯುತ್ತಾರೆ. ಸುದಾ, ಎಂಬ ವ್ಯಕ್ತಿಯನ್ನು ತಾವು ನೋಡಿರುವುದಿಲ್ಲ ಸುಳ್ಳು

ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಆರೋಪಿಗೆ ಯಾವತ್ತೂ ಹಣ ಕೊಟ್ಟಿರುವುದಿಲ್ಲ ನಿಮ್ಮ ತಂದೆಗೆ ಕೊಟ್ಟಿರುವಂತಹ ಚೆಕ್ ಅನ್ನು ಪಡೆದುಕೊಂಡು ದುರ್ಬಳಕೆ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಸುಧ ಎಂಬುವವರು ನಿಮಗೆ ಯಾವುದೇ ಚೆಕ್ ಅನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸುಧಾ ಎಂಬುವವರು ನಿಮ್ಮ ಮೇಲೆ ಮತ್ತು, ಹರೀಶ್, ಅಶೋಕ ಚಂದ್ರಶೇಖರ್ , ರಾಮಾಂಜಿನೇಯಪ್ಪ ಮತ್ತು ವಿಜಯ ಮೂರ್ತಿ ಎಂಬುವವರ ಮೇಲೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಅವರು ಯಾರು ಅಂತ ನನಗೆ ಗೊತ್ತಿರುವುದಿಲ್ಲ ಪ್ರಕರಣ ದಾಖಲಿಸಿರುವುದು ನನಗೆ ಗೊತ್ತಿಲ್ಲ. ನಿಮ್ಮ ತಂದೆ ಮತ್ತು ಹರೀಶ್, ಅಶೋಕ ಚಂದ್ರಶೇಖರ್ ಮತ್ತು ನೀವು ಸುಧಾ ರವರ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಹಲವಾರು ಪ್ರಕರಣಗಳನ್ನು ದಾಖಲು ಮಾಡಿರುತ್ತೀರಿ ಎಂದರೆ ಇಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.